MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:75 ENGLISH DAILY Subscription Yearly - Rs. - WEDNESDAY 27-10-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಚಿಕಾಗೋ ಗೋಧಿ, ಜೋಳ ಫ್ಯೂಚರ್ ದರ ಹೆಚ್ಚಳ

ಉತ್ಪಾದನೆ ಕುಂಠಿತವಾಗುವ ಭಯ ಹಾಗೂ ಜಾಗತಿಕ ಬೇಡಿಕೆ ಹೆಚ್ಚಳದಿಂದ ಚಿಕಾಗೋ ಗೋಧಿ ಫ್ಯೂಚರ್ ದರ 2 ತಿಂಗಳ ಗರಿಷ್ಠ ಮಟ್ಟಕ್ಕೇರಿದೆ. ಗೋಧಿ ಪೂರೈಕೆ ಬಿಗುವಿನಿಂದ ಜೋಳ ದರವೂ 2 ವಾರಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳವಾಗಿದೆ. ಪ್ರತಿಕೂಲ ಹವಾಮಾನ ಬಿತ್ತನೆ ಪ್ರದೇಶ ಇಳಿಕೆಯಿಂದ ಗೋಧಿ, ಜೋಳ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ.

## 2021 ರಲ್ಲಿ ಮಲೇಶ್ಯಾದ ಪಾಮೆಣ್ಣೆ ಉತ್ಪಾದನೆ 6 ಶೇಕಡಾ ಇಳಿಕೆ ಸಾಧ್ಯತೆ

ಮಲೇಶ್ಯಾದ ಪಾಮೆಣ್ಣೆ ಉತ್ಪಾದನೆ 2021 ರಲ್ಲಿ 6 ಶೇಕಡಾ ಇಳಿಕೆಯಾಗಿ 18 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ. ಇದು 2016 ರಿಂದ ಈ ತನಕದ ಕನಿಷ್ಠ ಉತ್ಪಾದನೆಯಾಗಿದೆ. ಕಾರ್ಮಿಕ ಅಭಾವದಿಂದ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಜಾಗತಿಕ ಹೆಚ್ಚಿನ ಖಾದ್ಯತೈಲಗಳು ಪೂರೈಕೆಯ ಕೊರತೆಯನ್ನೆದುರಿಸುತ್ತಿವೆಯೆನ್ನಲಾಗಿದೆ.

## ಜಾಗತಿಕ ಕಾಳುಮೆಣಸು ದರ ಹೆಚ್ಚಳ ಸಾಧ್ಯತೆ

ಜಾಗತಿಕ ಪ್ರಮುಖ ಉತ್ಪಾದಕ ದೇಶಗಳಾದ ವಿಯೆಟ್ನಾಂ, ಬ್ರೆಜಿಲ್ ಹಾಗೂ ಇಂಡೋನೇಶಿಯಾಗಳಲ್ಲಿ ಪ್ರತಿಕೂಲ ಹವಾಮಾನದಿಂದ ಕಾಳುಮೆಣಸು ಉತ್ಪಾದನೆ ಇಳಿಕೆಯಾಗಲಿದೆಯೆಂದು ಅಂದಾಜಿಸಲಾಗಿದೆ. ಹಾಗೆಯೇ ಭಾರತದ ಉತ್ಪಾದನೆಯೂ ಪ್ರತಿಕೂಲ ಹವಾಮಾನದಿಂದ ಇಳಿಕೆಯಾಗುವ ಸಾಧ್ಯತೆಯಿದೆ. ಜಾಗತಿಕ ಮಟ್ಟದಲ್ಲಿ ಕಾಳುಮೆಣಸಿಗೆ ಉತ್ತಮ ಬೇಡಿಕೆಯಿದ್ದು ಬೇಡಿಕೆ ಹೆಚ್ಚಳವಾಗುತ್ತಿದೆ. ಇದರಿಂದ ಕಾಳುಮೆಣಸಿನ ದರ (ವಿಯೆಟ್ನಾಂ, ಇಂಡೋನೇಶಿಯಾ) ಹೆಚ್ಚಳವಾಗುತ್ತಿದ್ದು, ಭಾರತದಲ್ಲಿ ಸ್ವಲ್ಪ ಮಟ್ಟಿನ ಹೆಚ್ಚಳದೊಂದಿಗೆ ಸ್ಥಿರವಾಗಿದೆ. ಮುಂದಿನ ದಿನಗಳಲ್ಲಿ ದರ ಹೆಚ್ಚಳದ ಸಾಧ್ಯತೆಯಿದೆ.